ಆ) ಇದು ಅಂತರರಾಜ್ಯ ವಿವಾದದಲ್ಲಿ ಪ್ರಾರಂಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಬಂದಿದೆ.

ಕರ್ನಾಟಕ ರಾಜ್ಯ ಕೋಲಾರ ಜಿಲ್ಲೆಯ ಪರಗೋಡು ಕುಡಿಯುವ ನೀರು ಸರಬರಾಜು ಯೋಜನೆ ಮತ್ತು ಕೆಲವು ಸಣ್ಣ ನೀರಾವರಿ ಯೋಜನೆಗಳ ವಿಷಯದಲ್ಲಿ ಆಂದ್ರಪ್ರದೇಶ ಸರ್ಕಾರವು ದಿನಾಂಕ:14.05.2003 ರಂದು ಸರ್ವೋಚ್ಚ ನ್ಯಾಯಾಲಯದಲ್ಲಿ ಮೂಲ ದಾವೆ ಸಂಖ್ಯೆ:5/2003 ರನ್ನು ಹೂಡಿರುತ್ತದೆ.

ಇ) ಈ ಯೋಜನೆಯು ಪೂರ್ಣ ಪ್ರಮಾಣದಲ್ಲಿ ನಿರ್ಮಾಣ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಗಡಿನಾಡು ಬಾಗದಲ್ಲಿ ಉಂಟಾದ ಅಂತರ ರಾಜ್ಯ ನೀರಿನ ಹಂಚಿಕೆಯ ಭಿನ್ನಾಭಿಪ್ರಾಯದ ಕಾರಣ ಕೇಂದ್ರ ಜಲ ಆಯೋಗದ ಸೂಚನೆ ಮೇರೆಗೆ ಮೂಲ ಅಂದಾಜಿನಲ್ಲಿ ಅವಕಾಶ ಮಾಡಿದ 137.81 ಎಂ.ಸಿ.ಎಫ್.ಟಿ ಸಾಮರ್ಥ್ಯದ ಜಲಾಶಯದ ಬದಲು 106.15 ಎಂ.ಸಿ.ಎಫ್.ಟಿ ಸಾಮರ್ಥ್ಯಕ್ಕೆ ಜಲಾಶಯವನ್ನು ನಿರ್ಮಿಸಲಾಗಿದೆ.

ಈ) ಈ ಬ್ಯಾರೇಜ್‌ನಲ್ಲಿ ಹೂಳು ತುಂಬಿ ಕುಡಿಯುವ ನೀರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಕುಡಿಯುವ ನೀರು ಪೂರೈಕೆಯಲ್ಲಿ ವ್ಯತ್ಯಯವಿರುವುದಿಲ್ಲ. ಈ ಬ್ಯಾರೇಜ್‌ನಲ್ಲಿ ಹೂಳು ತುಂಬಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಉ) ಹಾಗಿದ್ದಲ್ಲಿ, ಏನು ಕ್ರಮ ಕೈಗೊಳ್ಳಲಾಗಿದೆ;

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಎರಡು ಸ್ಥಳೀಯ ಸಂಸ್ಥೆಗಳೊಂದಿಗೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಊ) ಈ ಬ್ಯಾರೇಜ್ ಸುತ್ತಮುತ್ತ ರಕ್ಷಣೆ ಇಲ್ಲದೆ ಅನೇಕರು ಇಲ್ಲಿ ಈಜಾಡಲು ಹೋಗಿ ಪ್ರಾಣ ಕಳೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ ಇಲಾಖೆಗೆ ಮಾಹಿತಿ ಬಂದಿರುವುದಿಲ್ಲ.

ಋ) ಹಾಗಿದ್ದಲ್ಲಿ, ಈ ಸಂಬಂಧ ಏನು ಕ್ರಮ ಕೈಗೊಳ್ಳಲಾಗಿದೆ?

ಸ್ಥಳೀಯ ಸಂಸ್ಥೆಗಳು ಕ್ರಮ ಕೈಗೊಳ್ಳಬೇಕಾಗಿದೆ.

<u>ಕರ್ನಾಟಕ ವಿಧಾನ ಸಭೆ</u>

358 ಶ್ರೀಸಂಪಂಗಿ.ಎನ್(ಬಾಗೇಪಲ್ಲಿ)

ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು

ಅ) ನಂಜುಂಡಪ್ಪ ವರದಿಯಂತೆ ಬಾಗೇಪಲ್ಲಿ ಪಟ್ಟಣವು ಅತಿ ಹಿಂದುಳಿದ ಪ್ರದೇಶವಾಗಿರುವುದು ಸರ್ಕಾರಕ್ಕೆ ಬಂದಿದೆಯೇ;

ಬಂದಿದೆ.

ಆ) ಈ ಪಟ್ಟಣದ ಪುರಸಭೆಯ ಸರಿಯಾದ ರೀತಿಯಲ್ಲಿ ಅಭಿವೃದ್ಧಿ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಾಗೇಪಲ್ಲಿ ಪಟ್ಟಣವನ್ನು ಅಭಿವೃದ್ಧಿಪಡಿಸಲು ಮಾನ್ಯ ಮುಖ್ಯಮಂತ್ರಿಯವರ ಸಣ್ಣ ಮತ್ತು ಮಧ್ಯಮ ಪಟ್ಟಣ ಅಭಿವೃದ್ಧಿ ಯೋಜನೆಯಲ್ಲಿ ಪರಿಗಣಿತವಾಗಿರುತ್ತದೆ. 2009–10ನೇ ಸಾಲಿನಲ್ಲಿ ಪಟ್ಟಣದಲ್ಲಿ ಮೂಲಸೌಕರ್ಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಈ ಯೋಜನೆಯಡಿಯಲ್ಲಿ ರೂ. 2.00 ಕೋಟಿ ಅನುದಾನವನ್ನು ಹಂಚಿಕೆ ಮಾಡಲಾಗಿರುತ್ತದೆ.

ಬಾಗೇಪಲ್ಲಿ ಪಟ್ಟಣಕ್ಕೆ ಪ್ರಸ್ತುತ ಕುಡಿಯುವ ನೀರಿನ ಸರಬರಾಜನ್ನು ಉತ್ತರ ಪಿನಾಕಿನಿ ನದಿ ಮೂಲದಿಂದ ಚಿತ್ರಾವತಿ ಬ್ಯಾರೇಜ್ ಮೂಲಕ ನಿರ್ವಹಿಸಲಾಗುತ್ತಿದ್ದು ಸರಬರಾಜು ತೃಪ್ತಿಕರವಿದ್ದು ನೀರಿನ ಕೊರತೆ ಇರುವುದಿಲ್ಲ.

ಇ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು (ವಿವರ ನೀಡುವುದು)?

ಬಾಗೇಪಲ್ಲಿ ಪಟ್ಟಣವು 2004–05ನೇ ಸಾಲಿನಲ್ಲಿ ಐಡಿಎಸ್ಎಂಟಿ ಯೋಜನೆಯಡಿ ಆಯ್ಕೆಗೊಂಡಿರುತ್ತದೆ. ಸದರಿ ಪಟ್ಟಣಕ್ಕೆ ರೂ.80.00 ಲಕ್ಷಗಳು (ಕೇಂದ್ರ ರೂ.48.00 ಲಕ್ಷಗಳು ಹಾಗೂ ರಾಜ್ಯದ ಪಾಲು ರೂ.32.00) ಲಕ್ಷಗಳು ಬಿಡುಗಡೆಯಾಗಿರುತ್ತದೆ.

ರೂ.80.00 ಲಕ್ಷಗಳ ಪೈಕಿ, ರೂ. 40.46 ಲಕ್ಷ ಮೊತ್ತದ ಕಾಮಗಾರಿಗಳನ್ನು ಕೈಗೊಂಡು ಹಣಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ. ಪಟ್ಟಣದಲ್ಲಿ ಕೈಗೊಂಡಿರುವ ಕಾಮಗಾರಿಗಳು–ಕೆ.ಎಸ್.ಆರ್.ಟಿ.ಸಿ. ಅವರಣದಲ್ಲಿ ವಾಣಿಜ್ಯ ಸಂಕೀರ್ಣ, ಪಟ್ಟಣ ಪಂಚಾಯಿತಿ ಕಛೇರಿಯ ಬಳಿ ವಾಣಿಜ್ಯ ಸಂಕೀರ್ಣ, ಮಾರ್ಕೆಟ್, ರಸ್ತೆ ಅಭಿವೃದ್ಧಿ ಮತ್ತು ಚರಂಡಿ ಕಾಮಗಾರಿಗಳು. ಬಾಕಿ ಕಾಮಗಾರಿಗಳು ಪ್ರಗತಿಯ ಹಂತದಲ್ಲಿರುತ್ತದೆ.

ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆಯಡಿ ಬಡತನ ನಿರ್ಮೂಲನಾ ಕಾರ್ಯಕ್ರಮಗಳಿಗೆ 2008–09ನೇ ಸಾಲಿನಲ್ಲಿ ರೂ. 6.89 ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ. ಹಾಗೂ ಸದರಿ ಸಾಲಿನಲ್ಲಿ ರೂ.7.31 ಲಕ್ಷಗಳ ವೆಚ್ಚವಾಗಿರುತ್ತದೆ. ಕೆಯುಐಡಿಎಫ್ಸಿ ವತಿಯಿಂದ ಬಾಗೇಪಲ್ಲಿ ಪಟ್ಟಣಕ್ಕೆ ನಗರ ಅಭಿವೃದ್ಧಿ ಯೋಜನೆ (ಸಿಡಿಪಿ) ತಯಾರಿಸಲಾಗಿರುತ್ತದೆ.

ಕೆಯುಐಡಿಎಫ್ಸಿ ವತಿಯಿಂದ ಬಾಗೇಪಲ್ಲಿ ಪಟ್ಟಣಕ್ಕೆ ನಗರ ಅಭಿವೃದ್ಧಿ ಯೋಜನೆ (ಸಿಡಿಪಿ) ತಯಾರಿಸಲಾಗಿರುತ್ತದೆ.

ಕೆಎಂಆರ್ಪಿ ಯೋಜನೆಯಡಿ ಪುರಸಭಾ ಕಾರ್ಯಗಳ ಗಣಕೀಕರಣ (Computerisation) ಮತ್ತು ನಿಧಿ ಆಧಾರಿತ ಲೆಕ್ಕಪದ್ಧತಿ (FBAS) ಅನುಷ್ಠಾನಗೊಳ್ಳುತ್ತಿದೆ.

2008–09ನೇ ಸಾಲಿಗೆ ಎಸ್‌ಎಫ್‌ಸಿ ಮುಕ್ತನಿಧಿ ಅನುದಾನ ರೂ.1,59,44.925 ಕೋಟಿಗಳನ್ನು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಮತ್ತು ರೂ.50.00 ಲಕ್ಷಗಳ ವಿಶೇಷ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. 2009–10ನೇ ಸಾಲಿಗೆ ಎಸ್.ಎಫ್.ಸಿ. ರೂ.246.64 ಲಕ್ಷಗಳ ಹಂಚಿಕೆ ಮಾಡಿದೆ.

ಕರ್ನಾಟಕ ವಿಧಾನ ಸಭೆ

360 ಶ್ರೀ ಸಂಪಂಗಿ.ಎನ್.(ಬಾಗೇಪಲ್ಲಿ)

ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು

ಅ) ಬಾಗೇಪಲ್ಲಿ ಮತಕ್ಷೇತ್ರದ ಗುಡಿಬಂಡೆ ಪಟ್ಟಣ ಪಂಚಾಯ್ತಿ ನಂಜುಂಡಪ್ಪ ವರದಿಯಂತೆ ಹಿಂದುಳಿದ ಪ್ರದೇಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ) ಈ ಪಟ್ಟಣ ಪಂಚಾಯ್ತಿ ಸರಿಯಾದ ರೀತಿಯಲ್ಲಿ ಅಭಿವೃದ್ಧಿ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಗುಡಿಬಂಡೆ ಪಟ್ಟಣವನ್ನು ಅಭಿವೃದ್ಧಿಪಡಿಸಲು ಮಾನ್ಯ ಮುಖ್ಯಮಂತ್ರಿಯವರ ಸಣ್ಣ ಮತ್ತು ಮಧ್ಯಮ ಪಟ್ಟಣ ಅಭಿವೃದ್ಧಿ ಯೋಜನೆಯಲ್ಲಿ ಪರಿಗಣಿತವಾಗಿರುತ್ತದೆ. 2009–10ನೇ ಸಾಲಿನಲ್ಲಿ ಪಟ್ಟಣದಲ್ಲಿ ಮೂಲಸೌಕರ್ಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಈ ಯೋಜನೆಯಡಿಯಲ್ಲಿ ರೂ. 2.00 ಕೋಟಿ ಅನುದಾನವನ್ನು ಹಂಚಿಕೆ ಮಾಡಲಾಗಿರುತ್ತದೆ.

ಗುಡಿಬಂಡೆ ಪಟ್ಟಣಕ್ಕೆ ಪ್ರಸ್ತುತ ಕುಡಿಯುವ ನೀರಿನ ಸರಬರಾಜನ್ನು ಉತ್ತರ ಪಿನಾಕಿನಿ ನದಿ ಮೂಲದಿಂದ ಚಿತ್ರಾವತಿ ಬ್ಯಾರೇಜ್ ಮೂಲಕ ನಿರ್ವಹಿಸಲಾಗುತ್ತಿದ್ದು ಸರಬರಾಜು ತೃಪ್ತಿಕರ ವಿದ್ದು ನೀರಿನ ಕೊರತೆ ಇರುವುದಿಲ್ಲ.

ಇ) ಬಂದಿದ್ದಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು)?

ಗುಡಿಬಂಡೆ ಪಟ್ಟಣ ಪಂಚಾಯಿತಿಯನ್ನು ಕೇಂದ್ರ ಪುರಸ್ಕೃತ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಮೂಲಸೌಕರ್ಯಗಳ ಅಭಿವೃದ್ಧಿ ಯೋಜನೆಯಡಿಯಲ್ಲಿ (UIDMSSMT) ರಸ್ತೆ ಮತ್ತು ಚರಂಡಿ ಯೋಜನೆ ಮತ್ತು ಒಳಚರಂಡಿ ಯೋಜನೆಗಳನ್ನು ಪ್ರಸ್ಥಾಪಿಸಿದ್ದು ಭಾರತ ಸರ್ಕಾರದ ಪರಿಶೀಲನೆಯಲ್ಲಿದೆ.

ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆಯಡಿ ಬಡತನ ನಿರ್ಮೂಲನಾ ಕಾರ್ಯಕ್ರಮಗಳಿಗೆ 2008–09ನೇ ಸಾಲಿನಲ್ಲಿ ರೂ.5.15 ಲಕ್ಷಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿರುತ್ತದೆ ಹಾಗೂ ಸದರಿ ಸಾಲಿನಲ್ಲಿ ರೂ.10.13 ಲಕ್ಷಗಳ ವೆಚ್ಚವಾಗಿರುತ್ತದೆ.

ಕೆಎಂಆರ್‌ಪಿ ಯೋಜನೆಯಡಿ ಪುರಸಭಾ ಕಾರ್ಯಗಳ ಗಣಕೀಕರಣ (Computerisation) ಮತ್ತು ನಿಧಿ ಆಧಾರಿತ ಲೆಕ್ಕಪದ್ಧತಿ (FBAS) ಅನುಷ್ಠಾನಗೊಳ್ಳುತ್ತಿದೆ. 2008–09ನೇ ಸಾಲಿಗೆ ಎಸ್‌ಎಫ್‌ಸಿ ಮುಕ್ತನಿಧಿ ಅನುದಾನ ರೂ.1,28.04,673 ಕೋಟಿಗಳನ್ನು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ. 2009–10ನೇ ಸಾಲಿಗೆ ಎಸ್.ಎಫ್.ಸಿ ರೂ.197.50 ಲಕ್ಷಗಳ ಹಂಚಿಕೆ ಮಾಡಿದೆ.